Pratham Mysore
Every Child in School and Learning Well

# ಪ್ರಜ್ಞಾನ ಪತ್ರಿಕೆ

01-10 -2022 | *ಪ್ರಥಮ್ ಮೈಸೂರ್ ಪ್ರೇರಿತ* | *ಸಂಚಿಕೆ-07*

**ನನ್ನನ್ನು ಗುರುತಿಸಬಲ್ಲಿರಾ?**

**ನಾನು ಯಾರು? ಚಿಟ್ಟೆಯೋ? ಪತಂಗವೋ?**




ಒಂದು-ಬಣ್ಣ ಬಣ್ಣ ರೆಕ್ಕೆಗಳುಳ್ಳ ಹೂಗಳ ಮೇಲೆ ಕೂರುವ ಆಕರ್ಷಕ ಕೀಟ,ಎರಡು-ದೀಪದ ಬೆಳಕಿಗೆ ಆಕರ್ಷಿತವಾಗುವ, ಗೋಡೆಗಳ ಮೇಲೆ ಕೂರುವ ಕೀಟ ಚಿಟ್ಟೆಯೋ? ಪತಂಗವೋ? ಇವು ಬಹುತೇಕ ಹೋಲುವುದರಿಂದ ಸಾಮಾನ್ಯವಾಗಿ ಜನರಿಗೆ ಇವೆರಡರ ನಡುವಿನ ವ್ಯತ್ಯಾಸ ತಿಳಿಯುವುದಿಲ್ಲ. ವೀಕ್ಷಿಸುವ ಸಾಮರ್ಥ್ಯ ಹೆಚ್ಚಿಸಿಕೊಂಡಾಗ,ಚಿಟ್ಟೆಯೋ? ಪತಂಗವೋ? ಎಂದು ಸುಲಭವಾಗಿ ಕಂಡುಹಿಡಿಯಬಹುದು.





* ಚಿಟ್ಟೆಗಳು ಬಣ್ಣ ಬಣ್ಣವಾಗಿದ್ದು ಆಕರ್ಷಕವಾಗಿರುತ್ತವೆ.
* ಚಿಟ್ಟೆ ಕೂರುವಾಗ ರೆಕ್ಕೆಗಳು ಹರಡಿರುತ್ತವೆ ಅಥವಾ ಜೋಡಿಸಿರುತ್ತವೆ.
* ಚಿಟ್ಟೆಗಳ ಆಹಾರ ಹೂವಿನ ರಸ





*ಪತಂಗಗಳ ಬಣ್ಣ ಮಂಕು,ಸಾಮಾನ್ಯವಾಗಿ ಕಂದು ಅಥವಾ ಬೂದು ಪತಂಗಗಳ ರೆಕ್ಕೆಗಳು ಚಿಕ್ಕವು.ಕೂರುವಾಗ ಕೆಳಮುಖವಾಗಿ ಹರಡಿರುತ್ತವೆ.

*ಕೊಳೆಯುವ ವಸ್ತುಗಳೇ ಇವುಗಳ ಆಹಾರ.

. .





* ಚಿಟ್ಟೆಗಳ ದೇಹ ತೆಳುವಾಗಿದ್ದು,ನೀಳವಾಗಿರುತ್ತವೆ.
* ಚಿಟ್ಟೆಗಳ ಸ್ಪರ್ಶತಂತುಗಳು ತೆಳು ಮತ್ತು ಉದ್ದ.ತುದಿ ಉಬ್ಬಿದೆ.
* ಚಿಟ್ಟೆಗಳು ಹಗಲಿನಲ್ಲಿ ಸಕ್ರಿಯವಾಗಿರುತ್ತವೆ.





* ಪತಂಗಗಳ ದೇಹ ಚಿಕ್ಕದಾಗಿ ದಪ್ಪವಾಗಿರುತ್ತವೆ.
* ಪತಂಗಗಳಲ್ಲಿ ಸ್ಪರ್ಶತಂತುಗಳು ಚಿಕ್ಕದಾಗಿ,ಕೆಲವೊಮ್ಮೆ ರೆಕ್ಕೆಯ ರೀತಿ ಇರುತ್ತವೆ.

*ಪತಂಗಗಳು ರಾತ್ರಿಯ ವೇಳೆ ಸಕ್ರಿಯವಾಗಿರುತ್ತವೆ.



**ನಿಮಗೆ ತಿಳಿದಿದೆಯೇ**

*ಚಿಟ್ಟೆಗಳ ಬಗ್ಗೆ ಅಧ್ಯಯನ ಮಾಡುವವರು ಲೆಪಿಡಾಪ್ಟರಿಸ್ಟ್

*ಚಿಟ್ಟೆಗಳಲ್ಲಿ ಸುಮಾರು ೩೦೦೦ ವಿಧಗಳಿವೆ.

*ಪತಂಗಗಳಲ್ಲಿ ಸುಮಾರು ೧,೬೦,೦೦೦ ವಿಧಗಳಿವೆ. ಆಸ್ಟ್ರೇಲಿಯದಲ್ಲಿ ಕಂಡುಬರುವ ಕೈರ್ನ್ಸ್ ಬರ್ಡ್ ವಿಂಗ್ ಎನ್ನುವ ಚಿಟ್ಟೆ ಪ್ರಪಂಚದಲ್ಲೇ ಅತಿ ದೊಡ್ಡ ಚಿಟ್ಟೆ

*ಭಾರತದ ಅತಿ ದೊಡ್ಡ ಚಿಟ್ಟೆ ಸದರ್ನ್ ಬರ್ಡ್



**ಪ್ರಶ್ನೆಗಳು**

*ಇವುಗಳು ಆಹಾರ ಧಾನ್ಯಗಳನ್ನು ತಿಂದು ಹಾಳು ಮಾಡುತ್ತವೆ.

**ಚಿಟ್ಟೆ, ಹುಳುಗಳು, ಕೀಟಗಳು, ಪತಂಗಗಳು**

*ಚಿಟ್ಟೆಗಳು __________ ಮಾಡುವುದರಿಂದ ರೈತನ ಮಿತ್ರ ಎನಿಸಿದೆ.

* ರೇಷ್ಮೆ ಗೂಡು ಕಟ್ಟುವುದು ಒಂದು ಜಾತಿಯ ________

**ಪತಂಗ, ಚಿಟ್ಟೆ, ಹುಳುಗಳು, ಮಿಡತೆ**

**ಪ್ರಥಮ್ ಚಟುವಟಿಕೆ ಮತ್ತು ಸಂಪನ್ಮೂಲ ಕೇಂದ್ರ**

ಹಿರಿಯ ಪ್ರಾಥಮಿಕ ಮಟ್ಟದಲ್ಲಿ ವಿಜ್ಞಾನ ಕಲಿಯಲು,ಕಲಿಸಲು ನಮ್ಮ ಕೇಂದ್ರವು ಉತ್ತಮ ಕೇಂದ್ರವಾಗಿದೆ.ಸದಸ್ಯತ್ವ್ವಯಂ ಸೇವಕರಾಗಲು ಅವಕಾಶವಿದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +919110477512**